# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ

## ಸಿ.ಸಿ ಸಂಖ್ಯೆ: 3/2022

| | |
|---|---|
| ಹೆಸರು | :ಕುಸುಮ |
| ಗಂಡನ ಹೆಸರು | :ಅಂಗಾರ |
| ಪ್ರಾಯ | :47 ವರ್ಷ |
| ಉದ್ಯೋಗ | :ಕೂಲಿ ಕೆಲಸ |
| ವಾಸ | :ಮರ್ಕಂಜ ಗ್ರಾಮ, ಸುಳ್ಯ ತಾಲೂಕು |

**ದಿನಾಂಕ 27.04.2024 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇದೆ. ಆರೋಪಿತರು ಮರ್ಕಂಜ ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಉಪಾಧ್ಯಾಕ್ಷರಾಗಿ ಕೆಲಸ ಮಾಡುತ್ತಿದ್ದರು. 2004 ನೇ ಸಾಲಿನಲ್ಲಿ ಮನೆ ನಿರ್ಮಾಣಕ್ಕಾಗಿ ಧನ ಸಹಾಯ ಕೋರಿ ಪಂಚಾಯತಿಯಲ್ಲಿ ಅರ್ಜಿ ಸಲ್ಲಿಸಿದ್ದೆ. ನನಗೆ ಮನೆ ನಿರ್ಮಾಣಕ್ಕಾಗಿ ಪಂಚಾಯಿತಿಯಿಂದ ರೂ.20,000/- ಧನಸಹಾಯ ಬಂದಿತ್ತು. ಆನಂತರ ಪಂಚಾಯಿತಿಯಲ್ಲಿ ಧನ ಸಹಾಯಕ್ಕಾಗಿ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ಆನಂತರ ನಮ್ಮ ಹೆಸರಿನಲ್ಲಿ ಪಂಚಾಯಿತಿಯವರು ಹಣ ತೆಗೆದುಕೊಂಡಿರುವುದಕ್ಕೆ ದೂರು ದಾಖಲಾಗಿದೆ ಎಂದು ಗೊತ್ತಾಗಿರುತ್ತದೆ. 2007-08 ನೇ ಸಾಲಿನಲ್ಲಿ ಇಂದಿರಾ ಯೋಜನೆಯಡಿಯಲ್ಲಿ ಆ ರೀತಿ ಹಣ ದುರುಪಯೋಗ ಮಾಡಿರುವ ಬಗ್ಗೆ ಗೊತ್ತಾಗಿರುತ್ತದೆ. ಸದರಿ ಯೋಜನೆಯಲ್ಲಿ ನನಗೆ ರೂ.20,000/- ಹಣ ಮಂಜೂರಾಗಿರುವ ಬಗ್ಗೆ

ಗೊತ್ತಾಗಿರುತ್ತದೆ. ಸದರಿ ಹಣವನ್ನು ಪಂಚಾಯಿತಿಯವರು ಪಡೆದುಕೊಂಡಿರುತ್ತಾರೆ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ**

2003-04 ರಲ್ಲಿ ನಾನು ಆಶ್ರಯ ಯೋಜನೆಯಡಿಯಲ್ಲಿ ಮನೆ ಕಟ್ಟಲು ಅರ್ಜಿ ಕೊಟ್ಟಿದ್ದೆ ಎಂದರೆ ಸರಿ. 2005 ನೇ ಸಾಲಿನಲ್ಲಿ ಮನೆ ರಿಪೇರಿಗಾಗಿ ನನಗೆ ಚೆಕ್ ಮೂಲಕ ರೂ.20,000/- ನೀಡಿದ್ದರು ಎಂದರೆ ಸರಿ. ಗ್ರಾಮ ಪಂಚಾಯಿತಿಗೆ ಸೇರಿದ ಕೇಶವ ಗೌಡ ಎಂಬುವವರು ನಮ್ಮ ನಮಗೆ ಬಂದು ಮನೆ ರಿಪೇರಿಗಾಗಿ ಹಣ ಮಂಜೂರು ಮಾಡುವುದಾಗಿ ಹೇಳಿದ್ದರು ಎಂದರೆ ಸರಿ. ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಪ್ರೇಮ್ ಸಿಂಗ್ ಮತ್ತು ಅಧ್ಯಕ್ಷ ಶಿವರಾಮ ಗೌಡ, ಅಲ್ಲದೇ ಸದಸ್ಯರಾದ ರಾಮಚಂದ್ರ ಅಲ್ದಡ್ಕ ಎಂಬುವವರು ಕೂಡ ಹಣ ಮಂಜೂರು ಮಾಡಿಸಿಕೊಡುವುದಾಗಿ ಹೇಳಿದ್ದರು ಎಂದರೆ ಸರಿ. ನಂತರದಲ್ಲಿ 2007-08 ನೇ ಸಾಲಿನಲ್ಲಿ ನನಗೆ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಮಂಜೂರಾಗಿದ್ದ ರೂ.25,000/- ಗಳನ್ನು ಅಧ್ಯಕ್ಷರಾದ ಶಿವರಾಮೇ ಗೌಡ, ಕಾರ್ಯದರ್ಶಿ ಪ್ರೇಮ್ ಸಿಂಗ್, ಬಿಲ್ ಕಲೆಕ್ಟರ್ ಕೇಶವಗೌಡ, ಸದಸ್ಯರು ರಾಮಚಂದ್ರ ಪಂಚಾಯಿತಿಗೆ ಸುಳ್ಳು ಲೆಕ್ಕ ಬರೆದು ಸರ್ಕಾರಕ್ಕೆ ಸುಳ್ಳು ಮಾಹಿತಿ ನೀಡಿ ಸದರಿ ಹಣವನ್ನು ತಾವೇ ಪಡೆದುಕೊಂಡು ನನಗೆ ಮೋಸ ಮಾಡಿದ್ದಾರೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿ. ಅದೇ ರೀತಿ ಬೇರೆಯವರಿಗೂ ಕೂಡ ವಂಚನೆ ಮಾಡಿದ್ದಾರೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಕೆ ವಕೀಲರಿಂದಃ**

ನನಗೆ ನಮ್ಮೂರಿನ ಶಂಕರ ನಾರಾಯಣ ಶಾಸ್ತ್ರಿಯವರ ಪರಿಚಯ ಇದೆ. ಅವರಿಗೆ ಮತ್ತು ಪಂಚಾಯಿತಿಯವರಿಗೆ ಸಾಕಷ್ಟು ಗಲಾಟೆ ಮತ್ತು ಪ್ರತಿಭಟನೆಗಳು ಆಗಿತ್ತು ಎಂದರೆ ಸರಿ. ಹಾಗಾಗಿ ಶಾಸ್ತ್ರಿಗಳು ನಮಗೆ ಈ ರೀತಿ ಹೇಳಬೇಕು ಎಂದು ಹೇಳಿದ್ದಾರೆ ಎಂದರೆ ಸರಿ.

ಶಾಸ್ತ್ರಿಗಳು ಹೇಳಿದ ಪ್ರಕಾರ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ನನಗೆ ಪಂಚಾಯಿತಿಯಿಂದ ಬರಬೇಕಾದ ಹಣ ಬಂದಿದೆ ಎಂದರೆ ಸರಿಯಲ್ಲ. ನಾನು ಪಂಚಾಯಿತಿಗೆ ಹೋಗಿ ಸಹಿ ಹಾಕಿರುವುದಿಲ್ಲ. ನನಗೆ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಬರಬೇಕಾದ ಹಣ ಬಂದಿದೆ ಮತ್ತು ನಾನು ಅದಕೆಕ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಶಾಸ್ತ್ರಿಗಳು ಹೇಳಿದ ಪ್ರಕಾರ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ವಂಚನೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಸುಳ್ಯ